**ದಿನಾಂಕ: 18.06.2022 ರಂದು ವಾರ್ಡ್ ಸಂಖ್ಯೆ: 184 ಉತ್ತರಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

## ವಾರ್ಡ್ ಕಮಿಟಿ ಸಭೆಗೆ ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಪದನಾಮ/ ಇಲಾಖೆ | ದೂರವಾಣಿ ಸಂಖ್ಯೆ | ಹಾಜರಾತಿ |
|---|---|---|---|---|
| 1. | ಶ್ರೀ ಡಿ.ಸುಂದರಯ್ಯ | ನೋಡಲ್ ಅಧಿಕಾರಿಗಳು | 9481904440 | ಹಾಜರು |
| 2. | ಶ್ರೀ. ಕೆ.ವಿ. ವೆಂಕಟರಮಣ | ಸಹಾಯಕ ಅಭಿಯಂತರರು ವಾರ್ಡ್ ನಂ.184 | 9449855591 | ಹಾಜರು |
| 3. | ಶ್ರೀ ಹನುಮಂತಪ್ಪ | ಸಹಾಯಕರು, ತೋಟಗಾರಿಕೆ ಇಲಾಖೆ | 9611977134 | ಹಾಜರು |
| 4. | ಶ್ರೀ ಸಿದ್ದರಾಜು | ಮೇಲ್ವಿಚಾರಕರು, ಬೀದಿದೀಪ ನಿರ್ವಹಣೆ | 98865775132 | ಹಾಜರು |
| 5. | ಶ್ರೀ ರವೀಂದ್ರ | ಮೇಲ್ವಿಚಾರಕರು, ಘನ ತ್ಯಾಜ್ಯ ನಿರ್ವಹಣೆ | 9880904058 | ಹಾಜರು |
| 6. | ಶ್ರೀ ಶಶಿಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು, ಉತ್ತರಹಳ್ಳಿ | 9164756618 | ಹಾಜರು |
| 7. | ಶ್ರೀಮತಿ ಚೇತನಾ ನಾಯಕ್ | ಸಬ್ ಇನ್ಸ್‌ಪೆಕ್ಟರ್, ಸಂಚಾರಿ ಪೋಲೀಸ್ ಠಾಣೆ, ಕುಮಾರಸ್ವಾಮಿ ಬಡಾವಣೆ | 9036063793 | ಹಾಜರು |
| 8. | ಶ್ರೀ ಜಗದೀಶ್. ಹೆಚ್.ಆರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ | 8277893182 | ಹಾಜರು |

## ವಾರ್ಡ್ ಕಮಿಟಿ ಸಭೆಗೆ ಗೈರು ಹಾಜರಾದ ಅಧಿಕಾರಿಗಳು

| ಕ್ರಸಂ | ಹೆಸರು | ಪದನಾಮ/ ಇಲಾಖೆ | ದೂರವಾಣಿ ಸಂಖ್ಯೆ | ಹಾಜರಾತಿ |
|---|---|---|---|---|
| 1. | ಶ್ರೀಮತಿ ನಿರ್ಮಲಾ. ವೈ.ಎನ್ | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ, 110 ಹಳ್ಳಿ ಯೋಜನೆ | 7760963672 | ಗೈರುಹಾಜರು |
| 2. | ಶ್ರೀ ಮಾಸಿಸ್.ಎ | ಮೇಲ್ವಿಚಾರಕರು, ಘನ ತ್ಯಾಜ್ಯ ನಿರ್ವಹಣೆ | 8123579737 | ಗೈರುಹಾಜರು |
| 3. | ಡಾ.ಸುಧಾ.ಬಿ.ಕೆ | ಆರೋಗ್ಯ ವೈದ್ಯಾಧಿಕಾರಿಗಳು, ಪಿ.ಹೆಚ್.ಸಿ, ಉತ್ತರಹಳ್ಳಿ | 9741688775 | ಗೈರುಹಾಜರು |
| 4. | ಶ್ರೀಮತಿ ಮೇಘಶ್ರೀ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ | 7760990673 | ಗೈರುಹಾಜರು |
| 5. | ಶ್ರೀ ರಾಜು | ಸಹಾಯಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ | 9448921600 | ಗೈರುಹಾಜರು |
| 6. | ಶ್ರೀಮತಿ ರೇಷ್ಮಾ | ಸಹಾಯಕ ಅಭೀಯಂತರರು , ಬೃಹತ್ ನೀರುಗಾಲುವೆ ಇಲಾಖೆ | 9088563246 | ಗೈರುಹಾಜರು |
| 7. | ಶ್ರೀ ಹರೀಶ್ | ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂರಕ್ಷಕ ಇಲಾಖೆ, | 9480685039 | ಗೈರುಹಾಜರು |

## ವಾರ್ಡ್ ಸಮಿತಿ ಸಭೆಗೆ ಹಾಜರಾದ ಸಮಿತಿ ಸದಸ್ಯರು

1. ಶ್ರೀ. ಎಸ್.ಕೆ.ಸುಧೀಂದ್ರ– ಪೂರ್ಣಪ್ರಜ್ಞಾ ಬಡಾವಣೆಯ RWA
2. ಶ್ರೀ ಅರುಣ್– ಎ.ಜಿ.ಎಸ್ ಬಡಾವಣೆ RWA
3. ಶ್ರೀ ಅಮರ್.ಎಂ.ಆರ್– ಎ.ಜಿ.ಎಸ್ ಬಡಾವಣೆ RWA
4. ಶ್ರೀ ವಿಜಿಕುಮಾರ್ – ಬನಶಂಕರಿ 5ನೇ ಹಂತದ RWA

ಮು.ತಿ.ನೋ

Scanned with CamScanner

ಮೇಲೆ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಮಿತಿ ನೋಡಲ್ ಅಧಿಕಾರಿಯಾದ ಶ್ರೀ ಡಿ.ಸುಂದರಯ್ಯರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಪರಿಚಯದೊಂದಿಗೆ ವಿವರಿಸುತ್ತಾ ಸದರಿ ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳು/ ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.

1. **ಬೀದಿ ದೀಪಗಳಿಗೆ ಸಂಬಂಧಪಟ್ಟಂತೆ**

- ಪೂರ್ಣ ಪ್ರಜ್ಞಾ ಬಡಾವಣೆಯಲ್ಲಿ ಎಲ್.ಇ.ಡಿ. ಬಲ್ಬ್ ಗಳನ್ನು ಅಳವಡಿಸಲು ಕೋರಿರುತ್ತಾರೆ..
- ಪೂರ್ಣ ಪ್ರಜ್ಞಾ ಬಡಾವಣೆಯ 6ನೇ ಮತ್ತು 7ನೇ ಮುಖ್ಯರಸ್ತೆಯಲ್ಲಿರುಚವ ಕಂಬಗಳಲ್ಲಿ ಕಂಟ್ರೋಲ್ ಸ್ವಿಚ್ ಹಾಳಾಗಿದ್ದು, ಸರಿಪಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಬೀದಿ ದೀಪ ರವರಿಗೆ ಸೂಚಿಸಿರುತ್ತಾರೆ.

2. **ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟಂತೆ.**

- ಪೂರ್ಣ ಪ್ರಜ್ಞಾ ಬಡಾವಣೆಯ 6ನೇ ಮತ್ತು 7ನೇ ಮುಖ್ಯರಸ್ತೆಯಲ್ಲಿರುವ ವಿದ್ಯುತ್ ಲೈನಿಗೆ/ ಘಟಕಕ್ಕೆ ಅಂಟಿಕೊಂಡಿರುವ ಮರದ ರೆಂಬೆಯನ್ನು ತೆರವುಗೊಳಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಬೆಸ್ಕಾಂ ಎಸ್-18 ಉಪವಿಭಾಗ ರವರಿಗೆ ಸೂಚಿಸಿರುತ್ತಾರೆ.

3. **ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಇಲಾಖೆಗೆ ಸಂಬಂಧಪಟ್ಟಂತೆ**

- ಬನಶಂಕರಿ 5ನೇ ಹಂತದಲ್ಲಿರುವ ಹಾಲಿ ಒಳ ಚರಂಡಿ ವ್ಯವಸ್ಥೆಯ ಪೈಪ್ ಲೈನ್ ಚಿಕ್ಕದಾಗಿದ್ದು, ಆರ್.ಆರ್.ನಗರ ವಲಯದಿಂದ ಯು.ಜಿ.ಡಿ ಲೈನ್ ಸಂಪರ್ಕ ಅಳವಡಿಸುತ್ತಿದ್ದು ವೈಜ್ಞಾನಿಕವಾಗಿ ಸರಾಗವಾಗಿ ಒಳಚರಂಡಿ ನೀರು ಹರಿಯಲು ಈ ಬಗ್ಗೆ 184 ವ್ಯಾಪ್ತಿಯ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರು ಮತ್ತು ಆರ್.ಆರ್ ನಗರ ವ್ಯಾಪ್ತಿಯ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರು ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆಯ ಬೂಸ್ಟರ್ ಪಂಪ್ ಅಳವಡಿಸಲು ಅಗೆದಿರುವ ಹೆಚ್ಚುವರಿ ಮಣ್ಣನ್ನು ಈ ಕೂಡಲೇ ತೆರವುಗೊಳಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು,_ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಇಲಾಖೆ ರವರಿಗೆ ಸೂಚಿಸಿರುತ್ತಾರೆ

4. **ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ**

- ಎ.ಜಿ.ಎಸ್ ಬಡಾವಣೆಯಲ್ಲಿರುವ ಪಾರ್ಕಿನಲ್ಲಿ ಹೊಸ ಗಿಡಗಳನ್ನು ನೆಡಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಅಧೀಕ್ಷಕರು ತೋಟಗಾರಿಕೆ_ಇಲಾಖೆ ರವರಿಗೆ ಸೂಚಿಸಿರುತ್ತಾರೆ.

-3-

Scanned with CamScanner

**5. ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ**

- ಪೂರ್ಣ ಪ್ರಜ್ಞಾ ಬಡಾವಣೆಯಲ್ಲಿ ಬರುವ ರಸ್ತೆ ಪಕ್ಕದ ಚರಂಡಿಗಳಲ್ಲಿ 12 ಮರಗಳು ಬೆಳೆದಿದ್ದು, ಮಳೆ ನೀರು ಸರಾಗವಾಗಿ ಹರಿಯದೇ ತೊಂದರೆ ಉಂಟಾಗುತ್ತಿದ್ದು, 12 ಮರಗಳನ್ನು ಈ ಕೂಡಲೇ ತೆರವುಗೊಳಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಅರಣ್ಯ ವಲಯಾಧಿಕಾರಿಗಳು ,ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ

**6. ಸ.ಕಾ.ನಿ.ಅ ಉತ್ತರಹಳ್ಳಿ. ಉಪವಿಭಾಗಕ್ಕೆ ಸಂಬಂಧಪಟ್ಟಂತೆ.**

- ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳ ಬಗ್ಗೆ ಕ್ರಮ ಕೈಗೊಂಡು ರಸ್ತೆ ಗುಂಡಿಗಳನ್ನು ಬಿಬಿಎಂಪಿ ವತಿಯಿಂದ ಮುಚ್ಚುತ್ತಿರುವುದಾಗಿ ಮತ್ತು ಅಲ್ಪ ಪ್ರಮಾಣದಲ್ಲಿ ಉಳಿದ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಂಡು ಶೀಘ್ರವಾಗಿ ಮುಚ್ಚಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು.
- ಬನಶಂಕರಿ 5ನೇ ಹಂತದಲ್ಲಿರುವ ಚರಂಡಿಯ ಹೂಳನ್ನು ತೆಗೆಯಲು ಕೋರಿರುತ್ತಾರೆ.
- ಬಿಬಿಎಂಪಿ ಆಯವ್ಯಯದಲ್ಲಿ ನಿರ್ಣಯಿಸಿದಂತೆ ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾದ 2022-23 ಸಾಲಿನಲ್ಲಿ ಅನುಮೋದನೆಗೊಂಡ ವಾರ್ಡ್ ವ್ಯಾಪ್ತಿಯ ಕಾಮಗಾರಿಗಳಿಗೆ **(Program Of Works)** ಗೆ ಕಡತಗಳನ್ನು ಮಂಡಿಸಿ ಅನುಮೋದನೆ ಹಾಗೂ ಕಾಮಗಾರಿಯ ಸಂಕೇತವನ್ನು ಪಡೆಯಲು ಈ ಸಭೆಯಲ್ಲಿ ತೀರ್ಮಾನಿಸಲಾಯಿತು.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ವಲಯ ಸಂಬಂಧಪಟ್ಟ ಕಾಮಗಾರಿ ಇಲಾಖೆ/ಇಂಜಿನಿಯರ್ ರವರಿಗೆ ಸೂಚಿಸಿರುತ್ತಾರೆ

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ.ಸುಂದರಯ್ಯ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಡಿ.ಸುಂದರಯ್ಯ
ನೋಡಲ್ ಅಧಿಕಾರಿ ಹಾಗೂ ಸ.ಕಾ.ನಿ.ಅ
ಅಂಜನಾಪುರ ಉಪವಿಭಾಗ

ಶ್ರೀ ವೆಂಕಟರಮಣ.ಕೆ.ವಿ
ಸಂಚಾಲಕರು ಹಾಗೂ ಸ.ಅ-184

Scanned with CamScanner